# ಕರ್ನಾಟಕ ಲೋಕಾಯುಕ್ತ

ಸಂಖ್ಯೆ. ಕಂಪ್ಲೆಂಟ್:ಉಪಲೋಕ್/ಜಿಎಲ್‌ಬಿ-7801/2015/ಎ.ಆರ್.ಇ-5

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ:05-01-2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಕಾಕರಗಲ್ ಗ್ರಾಮದಲ್ಲಿ ಪ್ರಕೃತಿ ವಿಕೋಪದಿಂದ ಅತಿವೃಷ್ಠಿ ಸಂಭವಿಸಿ ಹತ್ತಿ ಬೆಳೆನಷ್ಟವಾದ ಕಾರಣ ಪರಿಹಾರ ಒದಗಿಸದೆ ಇರುವುದರಿಂದ, ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳುವ ಬಗ್ಗೆ-.

---

1. ಶ್ರೀ ಹನುಮನಗೌಡ ಬಿನ್ ಹನುಮಂತರಾಯ, ಸಾ:ಕಾಕರಗಲ್, ಸಂಕೇಶ್ವರಹಾಳ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ನಮ್ಮ ಸಂಸ್ಥೆಗೆ ದೂರು ಸಲ್ಲಿಸಿ, ತಮ್ಮ ಜಮೀನು ಸರ್ವೆ ನಂ.382ರಲ್ಲಿ 3.15 ಎಕರೆ ವಿಸ್ತೀರ್ಣದಲ್ಲಿ ಬೆಳೆದ ಹತ್ತಿ ಬೆಳೆ ಧಾರಾಕಾರ ಮಳೆಯಿಂದ ಸಂಪೂರ್ಣವಾಗಿ ಕೊಚ್ಚಿ ಹೋಗಿ ನಷ್ಟವಾಗಿರುತ್ತದೆ ಮತ್ತು ಆ ನಷ್ಟದ ಬಗ್ಗೆ ಪರಿಹಾರ ನೀಡಲು ದೇವದುರ್ಗ ತಹಶೀಲ್ದಾರ್‌ರವರಿಗೆ ಅರ್ಜಿ ಸಲ್ಲಿಸಿದರೂ ಯಾವ ಪರಿಹಾರ ನೀಡಿರುವುದಿಲ್ಲ ಎಂದು ಆಪಾದನೆ ಮಾಡಿರುತ್ತಾರೆ.

2. ದೂರಿನಲ್ಲಿನ ಆಪಾದನೆಗಳನ್ನು ಮತ್ತು ತನಿಖಾ ವರದಿಯನ್ನು ಮತ್ತು ಅದಕ್ಕೆ ಲಗತ್ತಾದ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. 2014ರಲ್ಲಿ ಬಿದ್ದ ಮಳೆಯಿಂದ ದೂರುದಾರರ ಜಮೀನಿನ ಹತ್ತಿ ಬೆಳೆ ನಾಶವಾಗಿದ್ದ ಬಗ್ಗೆ ಗ್ರಾಮ ಲೆಕ್ಕಾಧಿಕಾರಿಗಳು ಮತ್ತು ಕಂದಾಯ ನಿರೀಕ್ಷಕರು ಸ್ಥಳ ತನಿಖೆ ಮಾಡಿ, ಶೇ.46ರಷ್ಟು ಬೆಳೆ ನಷ್ಟವಾಗಿದೆ ಎಂದು ದೃಢೀಕರಿಸಿದ ಆಧಾರದ ಮೇಲೆ ತಹಶೀಲ್ದಾರ್, ದೇವದುರ್ಗರವರು ಸರ್ಕಾರಿ ಸುತ್ತೋಲೆಯ ಪ್ರಕಾರ ಪರಿಹಾರ ನೀಡಲು ಬರುವುದಿಲ್ಲವೆಂದು ಈ ದೂರುದಾರರಿಗೆ ಮತ್ತು ಅದೇ ತರಹ ಬೆಳೆ ನಷ್ಟ ಹೊಂದಿದ ಇತರ ಜಮೀನುದಾರರಿಗೆ ಹಿಂಬರಹ ನೀಡಿರುತ್ತಾರೆ.

3.. ಸರ್ಕಾರಿ ಸುತ್ತೋಲೆ ಸಂಖ್ಯೆ: 32-3/2013-ಎನ್‌ಡಿಎಂ-1, ದಿನಾಂಕ 28.11.2013ರ ಮಾರ್ಗಸೂಚಿಯ ಆದೇಶದ ಕ್ರಮ ಸಂಖ್ಯೆ.5(i)(B) ರಂತೆ ಸಣ್ಣ ಮತ್ತು ಅತೀ ಸಣ್ಣ ರೈತರ ಜಮೀನಿನ ಬೆಳೆ ಪ್ರಕೃತಿ ವಿಕೋಪದಿಂದ ಶೇ.50ರಷ್ಟು ಬೆಳೆ ನಷ್ಟವಾದ ಸಂದರ್ಭದಲ್ಲಿ ಮಳೆ ಆಶ್ರಿತ ಜಮೀನಿನ ರೈತರಿಗೆ ಒಂದು ಎಕರೆಗೆ ರೂ.4500/- ಪರಿಹಾರ ಧನ ನೀಡಲು ಅವಕಾಶವಿರುತ್ತದೆ. ಅದಲ್ಲದೇ, ಅದೇ ಕ್ರಮ ಸಂಖ್ಯೆ.5(ii) ರ ಪ್ರಕಾರ ಪ್ರಕೃತಿ ವಿಕೋಪದಿಂದ ಶೇ.50ಕ್ಕಿಂತ ಜಾಸ್ತಿ ಬೆಳೆ ನಾಶವಾದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಲ್ಲದ ರೈತರಿಗೆ ಸಹ ಒಂದು ಹೆಕ್ಟೇರ್‌ಗೆ ಸೀಮಿತಗೊಳಿಸಿ, ರೂ.4500/-ರವರೆಗೆ ಪರಿಹಾರ ಹಣ ನೀಡಬಹುದಾಗಿರುತ್ತದೆ. ಆದರೂ ಸಹ ಈ ಪ್ರಕರಣದಲ್ಲಿ ದೂರುದಾರರ ಒಟ್ಟು ಜಮೀನು ಸರ್ವೇ ನಂ.382 ಮಸರಕಲ್ ಗ್ರಾಮದ ವಿಸ್ತೀರ್ಣ 3.15 ಎಕರೆಯಲ್ಲಿ 2014ನೇ ಸಾಲಿನಲ್ಲಿ ಹತ್ತಿ ಬೆಳೆಯನ್ನು ಬೆಳೆದಿದ್ದು ಮತ್ತು ಅದರಲ್ಲಿನ 1.15 ಎಕರೆಯ ಹತ್ತಿ ಬೆಳೆ ಆಗಸ್ಟ್-29ರಿಂದ 31ನೇ ಆಗಸ್ಟ್ 2014ರಲ್ಲಿ ಬಿದ್ದ ಭಾರಿ ಮಳೆಗೆ ನಷ್ಟವಾಗಿದ್ದು, ಗ್ರಾಮ ಲೆಕ್ಕಾಧಿಕಾರಿಗಳು, ಮಸರಕಲ್ ಮತ್ತು ಕಂದಾಯ ನಿರೀಕ್ಷಕರು, ದೇವದುರ್ಗರವರು ಮಾಡಿದ ಮಹಜರ್‌ನಂತೆ ಕಂಡುಬಂದಿದ್ದರೂ ಸಹ, ಅಸಮರ್ಪಕವಾಗಿ 46% ನಷ್ಟವಾಗಿದೆ ಎಂದು ತೀರ್ಮಾನ ಮಾಡಿದಂತೆ ತಹಶೀಲ್ದಾರರು ದೂರುದಾರರಿಗೆ ಮತ್ತು ಇನ್ನಿತರರಿಗೆ ದಿನಾಂಕ 19.01.2015ರಂದು ಹಿಂಬರಹ ನೀಡಿದ್ದು ಮತ್ತು ಅದು ಸಮಂಜಸವಾಗಿರುವುದಿಲ್ಲ. ಮೇಲೆ ಹೇಳಿದ ಸರ್ಕಾರಿ ಸುತ್ತೋಲೆಯನ್ನು ಗಮನಿಸಿದಾಗ ಸಣ್ಣ ಮತ್ತು ಅತಿ ಸಣ್ಣ ರೈತರಲ್ಲದ ರೈತರ ಜಮೀನಿನಲ್ಲಿ ಬೆಳೆ ನಷ್ಟ ಹೊಂದಿದಾಗ ಒಂದು ಹೆಕ್ಟೇರ್‌ವರೆಗಿನ ಬೆಳೆ ನಷ್ಟಕ್ಕೆ ಸರ್ಕಾರದಿಂದ ಪರಿಹಾರ ನೀಡಲು ಅವಕಾಶ ಮಾಡಿಕೊಟ್ಟಿರುತ್ತದೆ. ಈ ಪ್ರಕರಣದಲ್ಲಿ ದೂರುದಾರರಿಗೆ 1.15 ಎಕರೆ ಜಮೀನಿನ ಪೂರ್ತಿ ಹತ್ತಿ ಬೆಳೆ ನಷ್ಟವಾಗಿದ್ದರೂ ಸಹ ಅಸಮರ್ಪಕವಾಗಿ ಕೇವಲ 46% ಬೆಳೆ ನಷ್ಟವಾಗಿದೆ ಎಂದು ತೀರ್ಮಾನಿಸಿ, ಅವರಿಗೆ ಪರಿಹಾರ ನೀಡುವುದಕ್ಕೆ ಬರುವುದಿಲ್ಲವೆಂದು ಹಿಂಬರಹ ನೀಡಿದ್ದು, ಸದರಿ ಸುತ್ತೋಲೆಯ ಮಾರ್ಗಸೂಚಿಗೆ ವ್ಯತಿರಿಕ್ತವಾಗಿರುತ್ತದೆ.

4. ದೂರುದಾರರ 1.15 ಎಕರೆ ಜಮೀನಿನಲ್ಲಿ ಪೂರ್ತಿ ಬೆಳೆ ನಷ್ಟ ಹೊಂದಿದ್ದರೂ ಸಹ ಆ ಕ್ಷೇತ್ರದ ಬೆಳೆ ನಷ್ಟವನ್ನು ಶೇ.100 ಎಂದು ತೀರ್ಮಾನಿಸಿ, ಸುತ್ತೋಲೆಯಂತೆ ದೂರುದಾರರಿಗೆ ರೂ.1750/- ಪರಿಹಾರ ನೀಡಬಹುದಾಗಿತ್ತು. ಆದರೆ, ಗ್ರಾಮ ಲೆಕ್ಕಾಧಿಕಾರಿ, ಮಸರಕಲ್, ಕಂದಾಯ ನಿರೀಕ್ಷಕರು, ದೇವದುರ್ಗ ಮತ್ತು ತಹಶೀಲ್ದಾರ್, ದೇವದುರ್ಗರವರು ಇದನ್ನು ಕೂಲಂಕುಷವಾಗಿ ಪರಿಶೀಲಿಸದೇ, ದೂರುದಾರರಿಗೆ ಹಿಂಬರಹ ನೀಡಿದ್ದರಿಂದ, ದೂರುದಾರರಿಗೆ ಅನ್ಯಾಯವಾಗಿರುತ್ತದೆ.

12(1)



5. ಆದ್ದರಿಂದ, ಅತಿವೃಷ್ಠಿ ಮಳೆಯಿಂದ ಮೇಲ್ಕಂಡ ದೂರುದಾರರು ಬೆಳೆದ ಬೆಳೆಯು ನಷ್ಟವಾಗಿದ್ದು, ಇವರಿಗೆ ಬೆಳೆನಷ್ಟ ಪರಿಹಾರವನ್ನು ಸೂಕ್ತ ರೀತಿಯಲ್ಲಿ ಕಾನೂನಿನ್ವಯ ಒದಗಿಸಲು, ಸಂಬಂಧಪಟ್ಟ ಸಕ್ಷಮಪ್ರಾಧಿಕಾರಕ್ಕೆ ಆದೇಶಿಸಲು ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿಯನ್ನು ಸಲ್ಲಿಸಿ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಒಂದು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand
5/1

**(ನ್ಯಾಯಮೂರ್ತಿ ಎನ್. ಆನಂದ)**
**ಉಪಲೋಕಾಯುಕ್ತರು-1,**
**ಕರ್ನಾಟಕ ರಾಜ್ಯ, ಬೆಂಗಳೂರು.**